

ಡಾ.ವಿನೋದ ಛೆಬ್ಬಿ

ತನ್ನ ಮೇಲೆ ತನಗೆ ನಂಬಿಕೆ ಇಲ್ಲದಿದ್ದರೆ ಇತರರ ಮೇಲೂ ನಂಬಿಕೆ ಬರಲಾರದು!

# 134: ಪತಿಯೆಂಬ ಮಗು-2

ಕೀರ್ತಿಯು ತನ್ನ ಹಾಗೂ ಗಂಡನ ನಡುವೆ ಸಹಿಸಲಾರದಷ್ಟು ಇರುವ ವೈರುಧ್ಯಗಳ ಕಾರಣದಿಂದ ಮದುವೆ ಮುರಿದುಕೊಳ್ಳುವುದನ್ನು ಯೋಚಿಸುತ್ತ ನನ್ನ ಅಭಿಪ್ರಾಯ ಕೇಳಿದ್ದಾಳೆ. ಗರ್ಭಿಣಿಯಾಗಿದ್ದು ಖಚಿತವಾದರೆ ತಾನೊಬ್ಬಳೇ ಮಗುವನ್ನು ಬೆಳೆಸುವುದೆಂದು ಅಂದುಕೊಂಡಿದ್ದಾಳೆ.

ನಾನು ಯೋಚಿಸುತ್ತ ಹೇಳಿದೆ: 'ಕೀರ್ತಿ, ದಾಂಪತ್ಯವು ಬೇಕೋ ಬೇಡವೋ ಎಂದು ನಿರ್ಧರಿಸಲು ನೀವು ಕೊಡುವ ಕಾರಣಗಳು ಮಹತ್ವದ್ದಾದರೂ ಇಷ್ಟೇ ಸಾಲದು ಎನಿಸುತ್ತದೆ. ನಿಮ್ಮ ಗಂಡನ ಸ್ವಭಾವ, ರೀತಿ ನಡತೆ, ದೌರ್ಬಲ್ಯಗಳು ನಿಮ್ಮಿಬ್ಬರ ವ್ಯವಹಾರ, ಮನಸ್ತಾಪ, ಕಾಮಜೀವನ – ಇತ್ಯಾದಿಗಳ ಬಗೆಗೆ ವಿವರಿಸುತ್ತೀರಾ?' ಕೀರ್ತಿ ನೇರವಾಗಿ ಕುಳಿತುಕೊಂಡು ಮಾತು ಆರಂಭಿಸಿದಳು. ಮಾತಿನ ಹಿಂದೆ ತರ್ಕಬದ್ಧ ವಿಚಾರಧಾರೆ ಹಾಗೂ ಪೂರ್ವಸಿದ್ಧತೆ ಎದ್ದುಕಾಣುವಂತಿದ್ದವು.

ಕಿಶೋರ ಅಪ್ರಾಮಾಣಿಕ, ಹಾಗೂ ಅವನ ವಿಚಾರದಲ್ಲಿ ದ್ವಂದ್ವವಿದೆ. ಒಂದುಕಡೆ ಹೆಂಡತಿಗೆ ದುಡಿಯುವ ಅಗತ್ಯವಿಲ್ಲ, ತಾನು ಸಾಕಷ್ಟು ಸಂಪಾದಿಸುತ್ತೇನೆ ಎನ್ನುತ್ತಾನೆ. ಆದರೆ ಆಕೆ ಮನೆಯಲ್ಲಿದ್ದು ಬೇಸರವಾಗಿ ಕೆಲಸಕ್ಕೆ ಸೇರಿದಾಗ ಆಕೆಯ ಸಂಪಾದನೆಯ ಮೇಲೆ ಕಣ್ಣುಹಾಕುತ್ತ ಮನೆಯ ಖರ್ಚಿನಲ್ಲಿ ಪಾಲು ತೆಗೆದುಕೊಳ್ಳಲು ಹೇಳುತ್ತಾನೆ. ಆತನಿಗೆ ಹಣದ ಬಗೆಗೆ ಬಹಳ ಅಭದ್ರಭಾವ ಇದೆ. ಹೆಚ್ಚಿನ ಹಣ ಗಳಿಸಲು ಮಾಮೂಲೀ ಉದ್ಯೋಗವಲ್ಲದೆ ಇನ್ನೆರಡು ಅರೆಕಾಲಿಕ ಕೆಲಸಗಳನ್ನು ಹಿಡಿದಿದ್ದಾನೆ. ಹಾಗಾಗಿ ಮನೆಯಲ್ಲೂ ಲ್ಯಾಪ್‌ಟಾಪ್ ಹಿಡಿದುಕೊಂಡಿರುತ್ತಾನೆ. ಗಳಿಸಿದ ಹಣವನ್ನು ಉಳಿಸುವುದರಲ್ಲಿ ಅವನ ಯುಕ್ತಿ ಸಾಮಾನ್ಯವಲ್ಲ. ಅಪ್ಪನ ಕೈಯಲ್ಲಿ ಹಣಕೊಟ್ಟು ಹೆಂಡತಿಯು ತನ್ನನ್ನು ಕೇಳದ ಹಾಗೆ ಮಾಡಿದ್ದಾನೆ. ಇತ್ತೀಚೆಗೆ ಹೊಸ ಕಾರು ಕೊಳ್ಳಬೇಕೆಂದು ಯೋಚಿಸುತ್ತಿದ್ದಾನೆ. ಕಂತುಗಳಲ್ಲಿ ವ್ಯಯವಾಗುವ ಬಡ್ಡಿಯನ್ನು ಉಳಿಸಲು ಇಡಿಯಾಗಿ ಹಣ ಪಾವತಿಸಲು ಯೋಚಿಸಿದ್ದಾನೆ. ಆದರೆ ಅಷ್ಟು ಹಣ ಕೈಯಲ್ಲಿಲ್ಲ. ಅದಕ್ಕಾಗಿ ಕೀರ್ತಿಗೆ ತನ್ನಪ್ಪನ ಹತ್ತಿರ ಸಾಲ ಕೇಳಲು ಸೂಚಿಸುತ್ತಾನೆ. ಅಲ್ಲೂ ಒಂದು ನಿಯಮ ಹಾಕುತ್ತಾನೆ. ಈ ವಿಷಯವನ್ನು ಯಾರ ಮುಂದೆಯೂ ಹೇಳಬಾರದಂತೆ. ಯಾಕೆ? ಅವನ ಮರ್ಯಾದೆಯ ಪ್ರಶ್ನೆ! ಇವಳು ನಿರಾಕರಿಸಿದಾಗ, ಆಕೆಯ ಉಳಿತಾಯದ ಹಣವನ್ನೇ ಕೇಳುತ್ತಿದ್ದಾನೆ. ಈಕೆ ತನಗೆ ಕಾರಿನ ಅಗತ್ಯವಿಲ್ಲ, ಕಾರಿನಲ್ಲಿ ಮೆರೆಯಲು ಇಷ್ಟವೂ ಇಲ್ಲ ಎಂದಾಗ, ಅವಳಿಗೆ ಬೇಡವಾದರೂ ತನಗೆ ಬೇಕು ಎನ್ನುತ್ತಾನೆ. ಹಣ ಉಳಿಸುವವನಿಗೆ ಕಾರು ಯಾಕೆ? ತನ್ನ ಆರೋಗ್ಯ ಕೆಟ್ಟರೆ ಅವನನ್ನು ಆಸ್ಪತ್ರೆಗೆ ಸಾಗಿಸಲು ಕಾರು ಬೇಕು! ಅಷ್ಟಲ್ಲದೆ, ಹೆಂಡತಿಯು ದೊಡ್ಡ ಕಾರು ನಡೆಸುವುದನ್ನು ಕಲಿತುಕೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದಾನೆ.

ಅವನ ಆರೋಗ್ಯ ಕೆಡುವಂಥದ್ದು ಏನಿದೆ? ಕೀರ್ತಿ ವಿವರಿಸಿದಳು. ಮದುವೆಯಾದ ಮೊದಲ ವಾರವೇ ಗೊತ್ತಾಗಿದ್ದು ಏನೆಂದರೆ, ಕಿಶೋರನಿಗೆ ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಅತಿರೇಕ ಎನ್ನುವಷ್ಟು ಕಾಳಜಿ. ಕಾಳಜಿಗಿಂತಲೂ ಹೆಚ್ಚಾಗಿ ಬಿಗಡಾಯಿಸುವ ಭಯ. ಉದಾಹರಣೆಗೆ, ಸ್ವಲ್ಪ ಜ್ವರ ಎನ್ನಿಸಿದರೂ ಸಾಕು, ಔಷಧಿ ಅಂಗಡಿಯಲ್ಲಿ ಕೆಲಸ ಮಾಡುವ ಚಿಕ್ಕಪ್ಪನಿಗೆ ಫೋನಾಯಿಸಿ ಔಷಧಿ ಕೇಳುತ್ತಾನೆ. ತಕ್ಷಣ ತರಿಸಿ ನುಂಗಲು ಶುರುಮಾಡುತ್ತಾನೆ. ಸಾಕಾಗದ್ದಕ್ಕೆ ಕಿಶೋರನ ಅಪ್ಪ ಕೂಡ ಮಾತ್ರೆ ತೆಗೆದುಕೊಂಡಿದ್ದೀಯಾ ಎಂದು ಸಣ್ಣ ದನಿಯಲ್ಲಿ ವಿಚಾರಿಸುತ್ತ ಇರುತ್ತಾರೆ. ಒಂದು ಸಲ ಕೀರ್ತಿಯು ಮಾತ್ರೆಗಳ ಹೆಸರು ಕಂಡುಹಿಡಿದು, ಗೂಗಲಿಸಿದಾಗ ಗೊತ್ತಾಗಿದ್ದು ಏನು? ಕಿಶೋರನಿಗೆ ಸಕ್ಕರೆ ಕಾಯಿಲೆ (ಮಧುಮೇಹ) ಇದೆ. ಈಕೆಗೆ ಆಘಾತವಾಯಿತು. ಚಿಕ್ಕ ವಯಸ್ಸಿನಲ್ಲಿ ಮಧುಮೇಹ ಇದೆ ಎಂದಲ್ಲ. ತನ್ನ ಭವಿಷ್ಯವೇನು ಎಂದೂ ಅಲ್ಲ. ಗಂಡ ತನ್ನಿಂದ ಮುಚ್ಚಿಟ್ಟು ಹೊರಗಿನವಳನ್ನಾಗಿ ಮಾಡಿದ್ದಾನೆ ಎಂಬ ಕಾರಣದಿಂದ.

ಗಂಡ–ಹೆಂಡತಿಯ ನಡುವಿನ ಬಾಂಧವ್ಯ ಹೇಗಿದೆ? ಅವರ ಒಡನಾಟವು ಹೆಚ್ಚಿನಂಶ ಪರಸ್ಪರ ಅಪನಂಬಿಕೆಯಿಂದ ತುಂಬಿದೆ. ಕಿಶೋರನಿಗೆ ತನ್ನ ಗಂಡುತನದ ಬಗೆಗೆ ಕೀಳರಿಮೆ ಇದೆ. ಯಾಕೆಂದರೆ ಅವನ ಮುಖದ ಮೇಲೆ ಗಡ್ಡಮೀಸೆ ಕಾಣುವುದಿಲ್ಲ. ಒಂದು ಕಡೆ (ಗಡ್ಡಮೀಸೆ ಇಲ್ಲದೆ) ಮೂವತ್ತಮೂರಾದರೂ ಹದಿನೆಂಟರ ತರಹ ಕಾಣುತ್ತೇನೆ ಎಂದು ಕೊಚ್ಚಿಕೊಳ್ಳುತ್ತಾನೆ; ಇನ್ನೊಂದು ಕಡೆ ಅದೇ ಕಾರಣದಿಂದ ತಾನು ಚಿಕ್ಕವನೆಂದು ಕಂಡು ಯಾರೂ ಗೌರವಿಸುವುದಿಲ್ಲ ಎಂದು ಸಂಕಟಪಡುತ್ತಾನೆ. ಕಾಲೇಜಿನಲ್ಲಿ ಓದುವಾಗ ಗಡ್ಡಮೀಸೆ ಬರದೆ 'ಹೆಣ್ಣಿಗ' ಎಂದು ಸಹಪಾಠಿಗಳ ಅಪಹಾಸ್ಯಕ್ಕೆ ಗುರಿಯಾಗಿದ್ದಾನೆ. ಯಾವ ಹುಡುಗಿಯೂ ಸ್ನೇಹಿತೆ ಆಗದಿದ್ದುದರಿಂದ ಹತಾಶೆಯಿಂದ ಒಂಟಿತನ ಒಪ್ಪಿಕೊಂಡಿದ್ದನಂತೆ. ಯಾವ ಹೆಣ್ಣೂ ಮೆಚ್ಚಲು ಸಾಧ್ಯವಿಲ್ಲ ಎಂದು ನಂಬಿದ್ದವನಿಗೆ ಕೀರ್ತಿ ಒಬ್ಬಳಾದರೂ ಮೆಚ್ಚಿದ್ದು ಅವನ ಗಂಡುತನದ ಬೆನ್ನು ಚಪ್ಪರಿಸಿದ ಹಾಗಾದರೂ, ಮೆಚ್ಚಿದ್ದು ಅವಳು ಮಾತ್ರ ಆಗಿರುವುದರಿಂದ ವಿಶ್ವಾಸ ಮೂಡುತ್ತಿಲ್ಲ. 'ನೀನಲ್ಲದೆ ನನ್ನನ್ನು ಯಾವ ಹೆಣ್ಣೂ ಮೆಚ್ಚುತ್ತಿರಲಿಲ್ಲ' ಎಂದು ಹೇಳಿಕೊಂಡಿದ್ದು, 'ನಾನು ನಿನಗೆ ನಿಜವಾಗಿಯೂ ಹಿಡಿಸಿದ್ದೇನೆಯೆ?' ಎಂದು ಸುಮಾರು ಸಲ ಪ್ರಶ್ನಿಸಿದ್ದಾನೆ. ಆಕೆಯ ಪ್ರೋತ್ಸಾಹಕ ಉತ್ತರವನ್ನು ನಂಬದೆ ಸಂದೇಹಿಸುತ್ತಾನೆ– ಯಾಕೆಂದರೆ ತನ್ನ ಗಂಡುತನವನ್ನು ಸ್ವತಃ ತಾನೇ ಮೆಚ್ಚಿಕೊಂಡಿಲ್ಲ! ಹಾಗಾದರೆ ಹೆಂಡತಿ ಇನ್ನೇನು ನೋಡಿ ಒಪ್ಪಿರಬಹುದು? ಹಣ! ತನ್ನ ಹಣದ ಮೇಲೆ ಕಣ್ಣಿಟ್ಟಿದ್ದಾಳೆ ಎಂದು ಸಂದೇಹಿಸುತ್ತಿದ್ದಾನೆ. ಒಮ್ಮೆ ಮಾತಿನ ಭರದಲ್ಲಿ, 'ನಾನು ಸತ್ತರೆ ನಿನಗೆ ತುಂಬಾ ಸಂತೋಷವಾಗುತ್ತದೆ. ಯಾಕೆಂದರೆ ನನ್ನ ಉಳಿತಾಯವೆಲ್ಲ ನಿನ್ನದಾಗುತ್ತದೆ.' ಎಂದು ಚುಚ್ಚಿದ್ದಾನೆ.

ಇನ್ನು, ಅವರ ಕಾಮಕೂಟ ಹೇಗಿದೆ? ಹತ್ತರಲ್ಲಿ ಎಂಟು ಸಲ ಆಕೆಗೆ ಅತೃಪ್ತಿಯೇ ಗತಿ. ಅದಕ್ಕೆ ಕಾರಣ ತನ್ನ ಶಿಶ್ನ ಚಿಕ್ಕದಾಗಿರುವುದು ಎಂದುಕೊಂಡಿದ್ದಾನೆ. ಹೆಂಡತಿ ಹಾಗಲ್ಲ, ಆತ್ಮೀಯತೆಯ ಕೊರತೆಯೇ ಕಾರಣ ಎಂದರೂ ನಂಬುತ್ತಿಲ್ಲ. ಮಗುವಾದರೆ ಸಾಕು, ತನ್ನ ಪ್ರಬುದ್ಧತೆಯ, ಗಂಡುತನದ ಜಾಹೀರು ಆಗುತ್ತದೆ ಎನ್ನುತ್ತಾನೆ. ಆದರೆ ತಂದೆತನದ ಜವಾಬ್ದಾರಿ ಹೊರಲು ತಯಾರಿಲ್ಲ .

ಇದೆಲ್ಲ ಹೇಳಿಕೊಳ್ಳುವಾಗ ಒಂದು ವಿಷಯ ಗಮನಿಸಿದೆ. ಕೀರ್ತಿಯು ಗಂಡನ ವರ್ತನೆಯ ಬಗೆಗೆ ಹೇಳಿಕೊಳ್ಳುತ್ತಿದ್ದಳೇ ವಿನಾ ಅದಕ್ಕೆ ತನ್ನ ಭಾವನಾತ್ಮಕ ಪ್ರತಿಕ್ರಿಯೆನ್ನು ತೋರಿಸುತ್ತಿರಲಿಲ್ಲ. ಅದನ್ನು ಕೇಳಿದಾಗ ಹೇಳಿದಳು. ಆಕೆಗೆ ತುಂಬಾ ಒಂಟಿತನ ಕಾಡುತ್ತಿದೆ. ಅದರಲ್ಲೂ ತನ್ನ ಕುಟುಂಬದ ಬಾಂಧವ್ಯ, ತನ್ನ ಹಳ್ಳಿ, ಅಲ್ಲಿಯ ತೋಟ, ಪ್ರಾಣಿಗಳು, ಋತುಮಾನಕ್ಕೆ ತಕ್ಕಂತೆ ಬದಲಾಗುವ ಪರಿಸರ – ಇಂಥ ಮೈಪುಳಕ ತರುವ ಜೀವಧಾರೆಯಿಂದ ದೂರವಾಗುತ್ತಿದ್ದೇನೆ ಎಂದು ಅಳುತ್ತಾಳೆ. ಈಕೆ ಅಳುವಾಗ ಕಿಶೋರ ಏನು ಮಾಡುತ್ತಾನೆ? ಒಂದೋ, ಗಾಬರಿಯಾಗಿ ಬುದ್ಧಿ ತೋಚದೆ ಕೂಡುತ್ತಾನೆ; ಅಥವಾ ಎಲ್ಲವೂ ಸರಿಹೋಗುತ್ತದೆ ಬಿಡು ಎಂಬ ಒಣ ಭರವಸೆ ಕೊಟ್ಟು ಆಕಡೆ ತಿರುಗಿ ಮಲಗುತ್ತಾನೆ. ಹಾಗಾಗಿ ಇವಳ ಹೃದಯಕ್ಕೆ ಹತ್ತಿರವಾಗುತ್ತಿಲ್ಲ.

ಕೀರ್ತಿಯ ಅಳಲು ಅರ್ಥವಾಯಿತು. ಆಕೆಯ ಗಂಡನನ್ನೂ ಅರ್ಥಮಾಡಿಕೊಳ್ಳಬೇಕಲ್ಲ? ಅದಕ್ಕಾಗಿ ಕಿಶೋರನನ್ನು ಕರೆದುಕೊಂಡು ಬರಲು ತಿಳಿಸಿದೆ.

ಕಿಶೋರನ ಜೊತೆಗೆ ಏನು ನಡೆಯಿತು ಎಂಬುದನ್ನು ಮುಂದಿನ ಸಲ ಹೇಳುತ್ತೇನೆ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ).